## ಗಂಡು ಮಕ್ಕಳನ್ನು ಬೆಳೆಸೋದು ಹೇಗೆ?

'ಗಂಡು ಮಕ್ಕಳನ್ನು ಬೆಳೆಸೋದು ಹೇಗೆ?' ಮುಖಪುಟ ಲೇಖನ (ರಾಜಲಕ್ಷ್ಮಿ ಕೋಡಿಬೆಟ್ಟು, ಸೆ. 16) ಅತ್ಯಂತ ಸಕಾಲಿಕ. ಸ್ವಚ್ಛಂದತೆ ಜನ್ಮಸಿದ್ಧ ಹಕ್ಕು ಎಂಬ ಪ್ರಜ್ಞೆಯೊಂದಿಗೆ ಮಗನನ್ನು ಬೆಳೆಸುವುದು ತಪ್ಪು. ಅದರಂತೆಯೇ ಗಂಡು ಅಳಬಾರದು, ಭಾವನೆ ವ್ಯಕ್ತಪಡಿಸಬಾರದು ಎಂಬ ಭಾವನೆಯೂ ಸಲ್ಲದು. ಮಾನವೀಯ ಮೌಲ್ಯಗಳನ್ನು ಇಬ್ಬರಲ್ಲಿಯೂ ಸಮನಾಗಿ ಬಿತ್ತುವುದು ಆವಶ್ಯಕ.

—ವಿದ್ಯಾ ಶಿರಹಟ್ಟಿ, ಧಾರವಾಡ

ಈ ಸಮಸ್ಯೆಗೆ ನಮ್ಮಲ್ಲಿ ಪರಿಹಾರ ಸುಲಭ ಸಾಧ್ಯವಿಲ್ಲ. ಈ ಪಿಡುಗಿಗೆ ಬೇರೆ ಬೇರೆ ದೇಶ, ಸಮಾಜಗಳಲ್ಲಿ ಏನಾದರೂ ಪರಿಹಾರ ಕಂಡುಕೊಂಡಿದ್ದಾರೆಯೇ ಮತ್ತು ಅದೇ ರೀತಿಯದು ನಮ್ಮಲ್ಲೂ ಅಳವಡಿಸಿಕೊಳ್ಳಬಹುದೇ ಎಂಬುದನ್ನೂ ತಿಳಿಸುವ ಪ್ರಯತ್ನ ಲೇಖಕಿ ಮಾಡಬೇಕಿತ್ತು.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

ಎಲ್ಲಾ ಹೆಣ್ಣುಮಕ್ಕಳು ಬರೆಯುವಂತೆ ಇವರೂ ಪುರುಷ ಪ್ರಧಾನ ಸಮಾಜವನ್ನು ಗುರಿಯಾಗಿಸಿದ್ದಾರೆ. 'ಓದಿದ ಗಂಡು ಹೆಣ್ಣಾದ, ಓದಿದ ಹೆಣ್ಣು ಗಂಡಾದಳು' ಎನ್ನುವ ಭೈರಪ್ಪನವರ ಮಾತಿನಂತೆ ಸಮಾನತೆಯ ಸುಳ್ಳು ಹೋರಾಟದಲ್ಲಿ ತಮ್ಮತನವನ್ನು ಬಲಿಕೊಡುತ್ತಿದ್ದಾರೆ. ಸಂಯಮಿಗಳ ಮನಸ್ವಾಸ್ಥ್ಯ ಹಾಳುಮಾಡುವಂತೆ ಅರೆಬೆತ್ತಲೆ ಅಥವಾ ಬೆತ್ತಲೆಯೇ ಅನ್ನುವಷ್ಟು ಹೀನಾಯವಾಗಿ ದಿರಿಸು ಧರಿಸಿ ಸಮಾಜದ ಸ್ವಾಸ್ಥ್ಯ ಹಾಳುಮಾಡಲಿಕ್ಕೆ ಯಾರು ಅಧಿಕಾರ ಕೊಟ್ಟವರು?

—ರವೀಂದ್ರ ಕುಮಾರ್

## ಅಜರ್ ಛಾಯಾಲೋಕ

'ಮಂಡೂಕ ಲೋಕದ ಆ್ಯಕ್ಷನ್ ಕಟ್' ಚಿತ್ರಕಥನದಲ್ಲಿ (ಅಜರ್ ಸೆಟೆಯಾಡಿ, ಸೆ. 16) ವಿವಿಧ ಭಂಗಿಯ ಮಂಡೂಕಗಳ ಛಾಯಾಚಿತ್ರಗಳು ನನ್ನಂತಹ ಅನೇಕ ಪ್ರಾಣಿಪ್ರಿಯರನ್ನು ಬೇರೆಯೇ ಲೋಕಕ್ಕೆ ಕರೆದೊಯ್ದವು.

ಅವರ ಚಿತ್ರಗಳಿಗೆ 'ಪೋಸ್' ಕೊಡುವುದಕ್ಕೆ ಮಂಡೂಕಗಳೂ ಬಹಳೇ ಸಹಕಾರ ನೀಡಿದ್ದು ತುಂಬ ವಿಶೇಷ.

—ಛಾಯಾದ್ರಿ ಪಿ. ವೈದ್ಯ

## 'ಬೆಳಕಿನ ವಿದ್ಯುತ್ ಪರಿಣಾಮ...'

'ಬೆಳಕಿನ ವಿದ್ಯುತ್ ಪರಿಣಾಮ...' (ಲಕ್ಷ್ಮೀದೇವಿ ಪಾಟೀಲ, ಸೆ. 16) ಐನ್‌ಸ್ಟೈನ್ ಅವರ ಬಗೆಗಿನ ಲೇಖನ ಮನಮುಟ್ಟುವಂತೆ ಮೂಡಿಬಂದಿದೆ. ಅತ್ಯಂತ ಕ್ಲಿಷ್ಟಕರವಾದ 'ಸಾಪೇಕ್ಷ' ಸಿದ್ಧಾಂತವನ್ನು ಸಾಮಾನ್ಯ ವ್ಯಕ್ತಿಗಳೂ ಸುಲಭವಾಗಿ ಗ್ರಹಿಸುವಂತೆ ಲೇಖಕರು ಸೂಕ್ತ ಉದಾಹರಣೆಗಳೊಂದಿಗೆ ವಿವರಿಸಿರುವ ರೀತಿ ಶ್ಲಾಘನೀಯ. ಕವಿ ರವೀಂದ್ರನಾಥ ಟ್ಯಾಗೋರ್ ಅವರೊಂದಿಗಿನ



ಐನ್‌ಸ್ಟೈನ್ ಅವರ ಫೋಟೊ ಈ ಲೇಖನದ ಮಹತ್ವವನ್ನು ಮತ್ತಷ್ಟು ಅರ್ಥಪೂರ್ಣವಾಗಿಸಿದೆ.

—ಜಿ.ಕೆ. ಕಂಚಿವರದಯ್ಯ, ಕೊಪ್ಪಳ

ಐನ್‌ಸ್ಟೈನ್ ಅವರ ಸಾಪೇಕ್ಷತಾ ಸಿದ್ಧಾಂತ ಮತ್ತು ದ್ಯುತಿ ವಿದ್ಯುತ್ ಪರಿಣಾಮದ ಬಗ್ಗೆ ಸರಳವಾಗಿ ಕನ್ನಡಿಗರಿಗೆ ಸೂಕ್ತ ಉದಾಹರಣೆಗಳೊಂದಿಗೆ ಪರಿಚಯಿಸಿದ ಲಕ್ಷ್ಮೀದೇವಿ ಪಾಟೀಲ ಅವರಿಗೆ ಹೃತ್ಪೂರ್ವಕ ಧನ್ಯವಾದಗಳು. ವಿಜ್ಞಾನಕ್ಕೆ ಭಾಷಾ ಚೌಕಟ್ಟು ಎಂದಿಗೂ ಅಡ್ಡಿ ಬಾರದು ಎಂಬುದನ್ನೂ ಲೇಖಕಿ ಸಾದರಪಡಿಸಿದ್ದಾರೆ.

—ಶ್ರೀನಿವಾಸನ್ ಎಸ್.ಕೆ., ಬೆಂಗಳೂರು

ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್ ಅವರು ನೋಬೆಲ್ ಪಾರಿತೋಷಕ ಪಡೆದ ಶತಮಾನೋತ್ಸವದ ಈ ವರ್ಷದಲ್ಲಿ ಅವರ ಉತ್ತುಂಗದ ಸಾಧನೆಯ ನೆನಪು ಸವಿಸ್ತಾರವಾಗಿ ಚಿತ್ರಿತವಾಗಿದೆ.

—ಎಂ. ಆರ್. ಚಂದ್ರಶೇಖರ್, ಬೆಂಗಳೂರು

## ಒಣಹುಲ್ಲು

'ಒಣಹುಲ್ಲು' ಸಣ್ಣಕಥೆ (ಚಿಂತಾಮಣಿ ಕೊಡ್ಲೆಕೆರೆ, ಸೆ. 16) ಓದಿದೆ. ಸಾವಿನ ನಿರೀಕ್ಷೆಯಲ್ಲಿರುವ ಸ್ವಾಮಿಯ ವಿವರಗಳ ಆರ್ದ್ರತೆ ಮನಮುಟ್ಟಿತು. ಎಲ್ಲಾ ಭ್ರಮೆಗಳನ್ನೂ ಕಳಚಿ ಕೇವಲ ದೇವರು ದೊಡ್ಡವನು ಎಂಬ ನಂಬಿಕೆಯನ್ನು ಅಂಗೈಯಲ್ಲಿ ಹಿಡಿದು ಕಾಯುತ್ತಿರುವ ಸ್ವಾಮಿಗಳ ವೃತ್ತಾಂತ ಕೊನೆಯವರೆಗೂ ಕುತೂಹಲದಿಂದ ಓದಿಸಿಕೊಳ್ಳುತ್ತದೆ.

—ಮಧುಮತಿ ಅಭಿಷೇಕ್, ಚಿತ್ರದುರ್ಗ

ಕಥೆಯಲ್ಲಿ ಆಟೋದಲ್ಲಿ ಪ್ರಯಾಣಿಸಿದ ತನ್ನ ಸಂಗಡಿಗನೊಂದಿಗೆ ಸನ್ಯಾಸಿ ತನ್ನ ಹಿಂದಿನ ವೃತಾಂತವನ್ನೆಲ್ಲ ಹೇಳಿ ಕೊನೆಗೆ, 'ಈ ದೇಹ ಹೋದದ್ದನ್ನು ಭದ್ರಯ್ಯ ನಿಮಗೆ ತಿಳಿಸಿದಾಗ ಈ ದೇಹ ಬೂದಿಯಾಗಲು ವ್ಯವಸ್ಥೆಮಾಡಿ ನನಗೊಂದು ಉಪಕಾರ ಮಾಡಿ' ಎಂದಾಗ ಜೀವನ ಇಷ್ಟೇ ಎಂದು ಮನಸ್ಸಿನ ಆಳದಲ್ಲಿ ನೋವಾಯಿತು.

—ಎಂ. ಟಿ. ರಮಾನಂದ ರೆಡ್ಡಿ, ಚಿತ್ರದುರ್ಗ

ಕಥೆಯಲ್ಲಿ ಆಕಸ್ಮಿಕವಾಗಿ ಭೇಟಿಯಾಗುವ ಒಬ್ಬ ಸನ್ಯಾಸಿಯನ್ನು ಕಥೆಗಾರರು ಅದ್ಭುತವಾಗಿ ಮತ್ತು ಗೌರವಪೂರ್ವಕವಾಗಿ ಚಿತ್ರಿಸಿದ್ದಾರೆ. ಸೊಗಸಾದ ನಿರೂಪಣೆ. ಲೇಖಕರಿಗೆ ಅಭಿನಂದನೆಗಳು.

—ರಮಾಕಾಂತ ಪುರಾಣಿಕ

## ರಿಯಲ್ ಹೀರೊ

'ರಿಯಲ್ ಹೀರೊ' (ಅಕ್ಷತಾ ಕೃಷ್ಣಮೂರ್ತಿ, ಸಂತೋಷ ಗುಡ್ಡಿಯಂಗಡಿ, ಸೆ. 9)ಸಂಚಿಕೆಯ ಮುಖಪುಟವನ್ನು ನೋಡಿ ಓದುವ ಆಸೆ ಹುಟ್ಟಿತು. ನಾಟಕದ ಮೇಷ್ಟ್ರಾಗಿರುವ ಸಂತೋಷ ಗುಡ್ಡಿಯಂಗಡಿ ಅವರ ಅನುಭವವನ್ನು ಓದಿದ ನಂತರ ನಾಟಕವನ್ನು ಬರೆಯುವ ಮತ್ತು ಅದರಲ್ಲಿ ಅಭಿನಯಿಸುವ ಆಸೆ ನನ್ನಲ್ಲಿ ಹೆಚ್ಚಾಯಿತು. ಈ ಸಂಚಿಕೆಯು ನನಗೆ ಮಾತ್ರವಲ್ಲ, ಯುವಪೀಳಿಗೆಗೆ ಮತ್ತು ಶಿಕ್ಷಕರಿಗೆ ಸ್ಫೂರ್ತಿಯಾಗಿದೆ.

—ಜೊಯಲ್ ಲೋಬೊ, ಬೆಂಗಳೂರು

## ಅರ್ಥಪೂರ್ಣ ಬರಹ

'ಶುದ್ಧಗಾಳಿಗೆ ಕೊಸರಾಟ ಬೇಡ' ಎಂಬ ಹೆಸರಿನಲ್ಲಿ 'ನಿಮ್ಮೊಡನೆ' ಪುಟದಲ್ಲಿ ಪ್ರಕಟವಾದ ಲೇಖನ (ಎನ್. ಉದಯಕುಮಾರ್, ಸೆ. 16), ಅರ್ಥಪೂರ್ಣವಾಗಿದೆ. ಪರಿಶುದ್ಧ ಗಾಳಿ ಈ ದೇಶದ ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕು. ಹಾಗೆಯೇ ಪರಿಸರ ಸಂರಕ್ಷಣೆ ಈ ದೇಶದ ಪ್ರತಿಯೊಬ್ಬ ನಾಗರಿಕನ ಕರ್ತವ್ಯ.

— ಜಗದೀಶ ಬಿ. ಹೊಸೂರು, ಮೈಸೂರು

## ರುಚಿಕರ ಆಹಾರ ಪುಟ

'ಹಲಸಿನ ಬೀಜದ ವಡೆ, ಸುಕ್ಕಿನುಂಡೆ' ಹೆಸರಿನ ಆಹಾರ ಲೇಖನ (ಪುಷ್ಪಾ ಎನ್.ಕೆ. ರಾವ್, ಸೆ. 9) ಚೆನ್ನಾಗಿತ್ತು. ಹಲಸಿನ ಬೀಜದಿಂದ ಇಷ್ಟೆಲ್ಲಾ ಹೊಸ ರುಚಿ ತಿಳಿಸಿದಿರಿ. ನೀವು ಮಾಡಿದ ಅಡುಗೆ ನೋಡಿದರೆ ಆಹಾ! ಎಂಥಾ ರುಚಿ ಅನ್ನಬೇಕು ಅನಿಸುತ್ತದೆ.

—ದೀಪಶ್ರೀ ಎಸ್. ಕೂಡ್ಲಿಗಿ, ವಿಜಯನಗರ

## ಟೊಟೊ ಪುರಸ್ಕಾರಕ್ಕೆ ಆಹ್ವಾನ

2022ನೇ ಸಾಲಿನ ಟೊಟೊ ಪುರಸ್ಕಾರಕ್ಕಾಗಿ 'ಟೊಟೊ ಫಂಡ್ಸ್ ದಿ ಆರ್ಟ್ಸ್' ಸಂಸ್ಥೆಯು ಪ್ರವೇಶಗಳನ್ನು ಆಹ್ವಾನಿಸಿದೆ. ವಯೋಮಿತಿ: 18 ರಿಂದ 29. ಕಥೆ, ಕವಿತೆ ಮತ್ತು ನಾಟಕ ಈ ಮೂರರಲ್ಲಿ ಯಾವುದೇ ಪ್ರಕಾರದಲ್ಲಿಯಾದರೂ ಪ್ರವೇಶ ಕಳಿಸಬಹುದು. ಟೊಟೊ ಪುರಸ್ಕಾರವು ₹ 50,000 ನಗದು ಬಹುಮಾನ ಒಳಗೊಂಡಿದೆ.

ಕೊನೇ ದಿನಾಂಕ: 30 ಸೆಪ್ಟೆಂಬರ್, 2021 ಇ ಮೇಲ್ ವಿಳಾಸ: totokannada@gmail.com ಪ್ರವೇಶದ ಜೊತೆಗೆ ಅರ್ಜಿ ಕಡ್ಡಾಯ. ಅರ್ಜಿಯನ್ನು http://totofundsthearts.blogspot.com ನಲ್ಲಿ ಪಡೆದುಕೊಳ್ಳಬಹುದು.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in